# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 710 |
| ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರೂಖ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| (ಅ) | 2015ನೇ ಸಾಲಿನಲ್ಲಿ ವಿವಿಧ ಎಸ್ಕಾಂಗಳ ವತಿಯಿಂದ ನೇರ ನೇಮಕಾತಿಗೊಂಡ ಸಹಾಯಕ ಇಂಜಿನಿಯರ್ (ವಿದ್ಯುತ್)/ (ಸಿವಿಲ್) ರವರುಗಳ ಸಂಖ್ಯೆ ಎಷ್ಟು; | ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸಹಾಯಕ ಇಂಜಿನಿಯರ್ (ವಿದ್ಯುತ್)/ (ಸಿವಿಲ್) ಹುದ್ದೆಗೆ 2015ನೇ ಸಾಲಿನಲ್ಲಿ ನೇರ ನೇಮಕಾತಿಗೊಂಡ ಸಂಖ್ಯೆಯ ವಿವರಗಳು ಈ ಕೆಳಗಿನಂತಿವೆ:<br>**(ಸಂಖ್ಯೆಗಳಲ್ಲಿ)**<br>(see table below)<br>* ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ 06 ಸಹಾಯಕ ಇಂಜಿನಿಯರ್ (ವಿ) ಹಾಗೂ 02 ಸಹಾಯಕ ಇಂಜಿನಿಯರ್ (ಸಿವಿಲ್) ರವರುಗಳು ಕೆಲಸವನ್ನು ಬಿಟ್ಟಿರುತ್ತಾರೆ. |
| (ಆ) | 2015ನೇ ಸಾಲಿನಲ್ಲಿ ವಿವಿಧ ಎಸ್ಕಾಂಗಳ ವತಿಯಿಂದ ನೇರ ನೇಮಕಾತಿಗೊಂಡ ಸಹಾಯಕ ಇಂಜಿನಿಯರ್ (ವಿದ್ಯುತ್)/ (ಸಿವಿಲ್) ರವರುಗಳ ಕಂಪನಿವಾರು ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೇ; | ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನೇರ ನೇಮಕಾತಿಗೊಂಡ ಸಹಾಯಕ ಇಂಜಿನಿಯರ್ (ವಿದ್ಯುತ್)/ (ಸಿವಿಲ್) ರವರುಗಳ ಕಂಪನಿವಾರು ಜೇಷ್ಠತಾ ಪಟ್ಟಿಯನ್ನು ಈಗಾಗಲೇ ಸಿದ್ಧಪಡಿಸಲಾಗಿರುತ್ತದೆ. |
| (ಇ) | ಸಿದ್ಧಪಡಿಸಲಾಗಿದ್ದಲ್ಲಿ ಸದರಿ ಸಹಾಯಕ ಇಂಜಿನಿಯರ್ (ವಿದ್ಯುತ್)/(ಸಿವಿಲ್) ರವರುಗಳು ಪದೋನ್ನತಿಗೆ ಅರ್ಹರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನೇರ ನೇಮಕಾತಿ ಹೊಂದಿದ ಕೆಲವು ಸಹಾಯಕ ಇಂಜಿನಿಯರ್ (ವಿದ್ಯುತ್/ ಸಿವಿಲ್) ರವರುಗಳು ಆರ್&ಪಿ ನಿಯಮಾವಳಿಗಳ ಅನ್ವಯ ಪದೋನ್ನತಿಗೆ ಅರ್ಹತಾದಾಯಕ ಸೇವೆಯನ್ನು ಪೂರೈಸಿರುವುದು ಗಮನಕ್ಕೆ ಬಂದಿರುತ್ತದೆ. |
| (ಈ) | ಬಂದಿದ್ದಲ್ಲಿ, ಸದರಿ ಸಹಾಯಕ ಇಂಜಿನಿಯರ್ (ವಿದ್ಯುತ್)/(ಸಿವಿಲ್) ರವರುಗಳಿಗೆ ಪದೋನ್ನತಿಯನ್ನು ಯಾವಾಗ ನೀಡಲಾಗುವುದು? | ಆದರೆ, ಕಂಪನಿವಾರು ಪ್ರತ್ಯೇಕ ನೇರ ನೇಮಕಾತಿ ಹೊಂದಿದ ಸಿಬ್ಬಂದಿಯ ಜೇಷ್ಠತಾ ವಿಷಯವು ಇತ್ಯರ್ಥಗೊಂಡಿರುವುದಿಲ್ಲ. |

| ಕಂಪನಿ | ಸಹಾಯಕ ಇಂಜಿನಿಯರ್ ಹುದ್ದೆ | | ಒಟ್ಟು |
|---|---|---|---|
| | ವಿದ್ಯುತ್ | ಸಿವಿಲ್ | |
| ಬೆಸ್ಕಾಂ | 82 | 3 | 85 |
| ಮೆಸ್ಕಾಂ | 46 | 1 | 47 |
| ಸೆಸ್ಕ್ | 38 | 1 | 39 |
| ಹೆಸ್ಕಾಂ | 78* | 2* | 80* |
| ಜೆಸ್ಕಾಂ | 32 | 1 | 33 |

...2

| | | |
|---|---|---|
| | | ಸರ್ಕಾರದ ಪತ್ರ ದಿನಾಂಕ: 04.02.2015 ರಲ್ಲಿ ಕಂಪನಿವಾರು ಪ್ರತ್ಯೇಕ ನೇರ ನೇಮಕಾತಿ ಹೊಂದಿದ ಸಿಬ್ಬಂದಿಯು ಈಗಾಗಲೇ ಕವಿಪ್ರನಿನಿಯಿಂದ ನೇಮಕಗೊಂಡಿರುವ ಸಿಬ್ಬಂದಿಗೆ ಜೇಷ್ಠತೆಯಲ್ಲಿ ಕಿರಿಯರೆಂದು ಪರಿಗಣಿಸಬೇಕೆಂದು ಮತ್ತು ಸದರಿ ಅಂಶವನ್ನು ಜಾರಿಗೊಳಿಸಲ್ಪಡುವ ನೇಮಕಾತಿ ಆದೇಶಗಳಲ್ಲಿ ನಮೂದಿಸುವುದೆಂದು ಸೂಚಿಸಲಾಗಿದೆ. ಅದರನ್ವಯ ಜಾರಿಗೊಳಿಸಲಾಗಿರುವ ನೇಮಕಾತಿ ಆದೇಶಗಳಲ್ಲಿ ಸದರಿ ಷರತ್ತನ್ನು ಸ್ಪಷ್ಟವಾಗಿ ನಮೂದಿಸಲಾಗಿರುತ್ತದೆ. ಹಾಗೂ ಈ ವಿಷಯದಲ್ಲಿ ಸಿಬ್ಬಂದಿಗಳಿಂದ ಮುಚ್ಚಳಿಕೆ ಪತ್ರಗಳನ್ನು ಸಹ ಪಡೆಯಲಾಗಿರುತ್ತದೆ.<br><br>ಕವಿಮಂ ನೌಕರರ ಸಂಘ ಸಂಸ್ಥೆಗಳ ಒಕ್ಕೂಟದ ದಿನಾಂಕ;15.09.2021 ರ ಪತ್ರದಲ್ಲಿ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನೇರ ನೇಮಕಾತಿ ಹೊಂದಿದ ಸಿಬ್ಬಂದಿಯ ಸೇವಾ ಜೇಷ್ಠತೆಯನ್ನು ಒಂದುಗೂಡಿಸಿ 'ಸಾಮಾನ್ಯ ಜೇಷ್ಠತಾ ಪಟ್ಟಿಯನ್ನು' ನಿರ್ವಹಿಸಿ, ನಂತರವೇ ಪದೋನ್ನತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಕೋರಿರುತ್ತಾರೆ.<br><br>ಮೇಲಿನ ಅಂಶಗಳಂತೆ, ಕಂಪನಿವಾರು ಪ್ರತ್ಯೇಕ ನೇರ ನೇಮಕಾತಿ ಹೊಂದಿದ ಸಿಬ್ಬಂದಿಯ ಜೇಷ್ಠತಾ ನಿರ್ವಹಣೆ ಇತ್ಯರ್ಥಪಡಿಸುವ ವಿಷಯವನ್ನು ಕವಿಪ್ರನಿನಿ ನಿರ್ದೇಶಕರುಗಳ ಮಂಡಳಿಯ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮಗಳನ್ನು ಜರುಗಿಸಲಾಗುವುದು. |

ಸಂಖ್ಯೆ: ಎನರ್ಜಿ 210 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು